**O.S.No.20/2018** **CW-2**

# ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಅರಕಲಗೂಡು

| | | |
|---|---|---|
| ಸಾಕ್ಷಿದಾರರ ಹೆಸರು | - | ಮಂಜು ಎಲ್ ಬಿ |
| ತಂದೆಯ ಹೆಸರು | - | ಬಸವೇಗೌಡ |
| ವಯಸ್ಸು | - | 42 ವರ್ಷ |
| ಉದ್ಯೋಗ | - | ಆಹಾರ ಶಿರಸ್ತೇದಾರರು ಮತ್ತು ಆಹಾರ ನಿರೀಕ್ಷಕರು |
| ವಾಸಸ್ಥಳ | - | ಹಾಸನ |

ಪ್ರಮಾಣೀಕರಿಸಿದ ದಿನಾಂಕಃ **27-08-2024**

ಮುಖ್ಯ ವಿಚಾರಣೆಃ

ನಾನು ಇಂದು ನ್ಯಾಯಾಲಯಕ್ಕೆ ಸಾಕ್ಷ್ಯ ನುಡಿಯಲು ಸಮನ್ಸ್ ಬಂದ ಮೇರೆಗೆ ಹಾಜರಾಗಿರುತ್ತೇನೆ. ನಾನು ಅರಕಲಗೂಡಿನ ತಾಲೂಕು ಕಚೇರಿಯಲ್ಲಿ ಆಹಾರ ಶಿರಸ್ತೇದಾರರು ಮತ್ತು ಆಹಾರ ನಿರೀಕ್ಷಕರು ಎಂದು ಕಳೆದ 4 ವರ್ಷಗಳಿಂದ ಕೆಲಸ ಮಾಡುತಿದ್ದೇನೆ. ಪಡಿತರ ಚೀಟಿ ನಂ.ARK14103427 ಸದರಿ ಪಡಿತರ ಚೀಟಿ ದಿಃ 04-10-2015 ರಲ್ಲಿ ನವೀಕರಣಗೊಳಿಸದೆ ರದ್ದಾಗಿರುತ್ತದೆ ಅದಕ್ಕೆ ಸಂಬಂಧಿಸಿದ ತಂತ್ರಾಂಶದ ರೇಷನ್ ಕಾರ್ಡಿನ ಸ್ಥಿತಿಯ ದಾಖಲಾತಿಯನ್ನು ಹಾಜರುಪಡಿಸಿದ್ದು ಅದನ್ನು ನಿಸಿ-12 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎಂ.ಎನ್.ಆರ್ ವಕೀಲರಿಂದಃ

1. ನಿಸಿ-12 ರ ಪಡಿತರ ಚೀಟಿ ಸಂಖ್ಯೆ ನಂ.ARK14103427 ಯಾವ ವರ್ಷದಲ್ಲಿ ವಿತರಣೆ ಮಾಡಲಾಗಿದೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಪಡಿತರ ಚೀಟಿ ರದ್ದಾದ 1 ವರ್ಷದ ಒಳಗೆ ಸಂಪೂರ್ಣ ಮಾಹಿತಿ ಇರುತ್ತದೆ, 1 ವರ್ಷದ ನಂತರ ಅದರ ಮಾಹಿತಿ ಇರುವುದಿಲ್ಲ. ನಿಸಿ-12ರ ಪರಿತರ ಚೀಟಿಯನ್ನು ಯಾವ ವರ್ಷದಲ್ಲಿ ನೀಡಲಾಗಿದೆ ಎಂಬ ಬಗ್ಗೆ ಮಾಹಿತಿ ಇಲ್ಲ. ತಂತ್ರಾಂಶದಲ್ಲಿ ಯಾವ ವರ್ಷದಲ್ಲಿ ವಿತರಣೆ ಆಗಿತ್ತು ಎಂಬುದನ್ನು ನಮೂದಿಸಬೇಕು ಎಂದರೆ ನಾವು ಅದನ್ನು ಎಂಟ್ರಿ ಮಾಡುವುದಿಲ್ಲ ಎಂದು ನುಡಿಯುತ್ತಾರೆ. ಪಡಿತರ ಚೀಟಿಯನ್ನು ನೀಡಲು ನಾವು ಆದಾಯ ಧೃಡೀಕರಣ ಪತ್ರ, ಆಧಾರ ಕಾರ್ಡ್,

ವಿದ್ಯುಚಕ್ತಿ ಬಿಲ್, ಗ್ಯಾಸ್ ಕನೆಕ್ಷನ್ ಬಿಲ್, ಕಂದಾಯದ ರಶೀದಿ, ಪಹಣಿ ಪತ್ರಿಕೆ ಇತರೆ ದಾಖಲಾತಿಗಳನ್ನು ಪಡೆಯುತ್ತೇನೆ. ನಾವು ಪಡಿತರ ಚೀಟಿ ಮಾಡಲು ಪಡೆದ ದಾಖಲಾತಿಗಳು ನಮ್ಮ ಇಲಾಖೆಗೆ ಬಂದಿರುತ್ತವೆ. ಪಡಿತರ ಚೀಟಿ ಮಾಡಲು ಒದಗಿಸಿದ ದಾಖಲಾತಿಗಳಿಗೆ ಸಂಬಂಧಿಸಿದಂತೆ ಕಡತಗಳು ನಮ್ಮ ಇಲಾಖೆಯಲ್ಲಿ ಇರುತ್ತವೆ. 6 ವರ್ಷಗಳ ಹಿಂದೆ ತಾಲೂಕು ಪಂಚಾಯಿತಿ ವ್ಯಾಪ್ತಿಯಲ್ಲಿ ದಾಖಲಾತಿಗಳನ್ನು ಪಡೆಯುತಿದ್ದರು. ನಂತರದಲ್ಲಿ ನಮ್ಮ ಇಲಾಖೆಯಿಂದ ದಾಖಲಾತಿಗಳನ್ನು ಪಡೆಯುತಿದ್ದೇವೆ. ತಾಲೂಕು ಪಂಚಾಯಿತಿಯಲ್ಲಿ ಪಡೆದಿರುವ ದಾಖಲಾತಿಗಳು ನಮ್ಮ ಇಲಾಖೆಗೆ ವರ್ಗಾವಣೆಯಾಗಿ ಬಂದಿಲ್ಲ. ಸದರಿ ಕಾರ್ಡಿನ ಫಲಾನುಭವಿಗಳು ಪಡಿತರವನ್ನು ಪಡೆದಿರುವ ಬಗ್ಗೆ ತಂತ್ರಾಂಶದಲ್ಲಿ ನಮೂದು ಇರುವುದಿಲ್ಲ. ಸದರಿ ನಿಸಿ-12ರಲ್ಲಿ ಯಾವ ಊರಿನವರು ಪಡಿತರವನ್ನು ಪಡೆದಿದ್ದಾರೆ ಎಂದರೆ ಹೊನ್ನವಳ್ಳಿ ಪಂಚಾಯಿತಿ ವ್ಯಾಪ್ತಿಯ ನೈಗೆರೆ ಗ್ರಾಮದವರು ಪಡಿತರವನ್ನು ಪಡೆದಿದ್ದಾರೆ. ನ್ಯಾಯಬೆಲೆ ಅಂಗಡಿಯಲ್ಲಿ ನಿಸಿ-12ರ ದಾಖಲಾತಿಯಲ್ಲಿ ನಮೂದಿಸಿರುವ ಸಂಖ್ಯೆಗೆ ಸಂಬಂಧಿಸಿದಂತೆ ಪಡಿತರವನ್ನು ಯಾರು ಪಡೆದಿದ್ದರೋ ಇಲ್ಲವೋ ಎಂಬ ಬಗ್ಗೆ ಮಾಹಿತಿ ಲಭ್ಯವಿರುವುದಿಲ್ಲ.

2. ಪಡಿತರವನ್ನು ಪಡೆಯಬೇಕಾದರೆ ಹೆಬ್ಬೆರಳ ಗುರುತನ್ನು ಪಡೆದ ನಂತರ ಪಡಿತರವನ್ನು ವಿತರಿಸಲಾಗುತ್ತದೆ ಎಂದರೆ ಸರಿ. ಪಡಿತರ ಚೀಟಿ ರದ್ದಾದರೆ ಅದರ ಬಗ್ಗೆ ಮಾಹಿತಿ ದೊರೆಯುವುದಿಲ್ಲ. ನಿಸಿ-12 ರ ಪಡಿತರ ಸಂಖ್ಯೆಗೆ ಸಂಬಂಧಿಸಿದಂತೆ ದಾಖಲಾತಿಗಳು ನಮ್ಮ ಬಳಿ ಇದ್ದರೂ ಸಹ ಇರುವುದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ನಿಸಿ-12ರ ಪಡಿತರ ಸಂಖ್ಯೆಗೆ ಸಂಬಂಧಿಸಿದ ಪಡಿತರ ಚೀಟಿ ನಮ್ಮ ವ್ಯಾಪ್ತಿಗೆ ಬರುತ್ತದೆ. ನಿಸಿ-12ರ ರದ್ದು ಪಡಿಸಿರುವ ಪಡಿತರ ಚೀಟಿ ನಮ್ಮ ಇಲಾಖೆಯನ್ನು ಹೊರತುಪಡಿಸಿ ನಮ್ಮ ಮೇಲ್ಪಟ್ಟ ಇಲಾಖೆಯಲ್ಲಿ ಅದರ ಬಗ್ಗೆ ಮಾಹಿತಿ ಲಭ್ಯವಿರುವುದಿಲ್ಲ. ನಿಸಿ-12ರ ಪಡಿತರ ಸಂಖ್ಯೆಗೆ ಸಂಬಂಧಿಸಿದ ಸಂಪೂರ್ಣ ದಾಖಲಾತಿಗಳು ನಮ್ಮ ಬಳಿ ಲಭ್ಯವಿದ್ದರೂ ಅವುಗಳನ್ನು ಹಾಜರುಪಡಿಸದೇ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ವಾದಿ ಪರವಾಗಿ ಶ್ರೀ ಹೆಚ್ ಆರ್ ಎನ್ ವಕೀಲರಿಂದಃ</u>

1. ಈ ಹಿಂದೆ ಸರ್ಕಾರವು APL, BPL, Anthodaya ಕಾರ್ಡನ್ನು ಜನ ಸಾಮಾನ್ಯರಿಗೆ ವಿತರಣೆ ಮಾಡಿದ್ದರು ಎಂದರೆ ಸರಿ. ಸರ್ಕಾರವು ತದ ನಂತರದಲ್ಲಿ ಕೆಲವು ಬೋಗಸ್ ಕಾರ್ಡುಗಳು ಇವೆ ಎಂಬ

ಕಾರಣದಿಂದ ಅವುಗಳೆಲ್ಲವನ್ನು ರದ್ದುಪಡಿಸಲಾಗಿತ್ತು ಎಂದರೆ ಸರಿ. ನಿಸಿ-12ರ ಪಡಿತರ ಸಂಖ್ಯೆಗೆ ಸಂಬಂಧಿಸಿದ ಪಡಿತರ ಕಾರ್ಡ್ ಬೋಗಸ್ ಕಾರ್ಡ ಎಂದು ರದ್ದಾಗಿದೆಯೋ ಅಥವಾ ಹೆಬ್ಬೆರಳ ಗುರುತು ನೀಡದೆ ರದ್ದು



ಮಾಡಲಾಗಿದೆಯೋ ಎಂದು ನನಗೆ ಮಾಹಿತಿ ಇಲ್ಲ. ನಿಸಿ-12ರ ಸಂಖ್ಯೆಯ ಕಾರ್ಡ್ ರದ್ದಾಗಿದೆ ಎಂದು ನಮೂದಿಸಲಾಗಿದೆ ಎಂದರೆ ಸರಿ. ನಿಸಿ-12ರ ಸಂಖ್ಯೆಯ ಕಾರ್ಡ್ ರದ್ದಾಗಿರುವುದರಿಂದ ನಮ್ಮ ಇಲಾಖೆಯಿಂದ ಸದರಿ ಕಾರ್ಡಿಗೆ ಮಾನ್ಯತೆ ಇರುವುದಿಲ್ಲ ಎಂದರೆ ಸರಿ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಸಹಿ/-

(ನಾಗೇಶ ಮೂರ್ತಿ ಬಿ.ಕೆ)

ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅರಕಲಗೂಡು